

## ದೇಶೋ ಭಿನ್ನ ರುಚಿ

ಯಾಂತ್ರಿಕ ಬುದ್ಧಿಮತ್ತೆ ತುಂಬಾನೇ ಅಪಾಯಕಾರಿ, ಅದು ಮನುಷ್ಯನ ಅಸ್ತಿತ್ವಕ್ಕೇ ಅಪಾಯ ತರಬಲ್ಲದು ಎಂಬುದರ ಬಗ್ಗೆ ತರಹೇವಾರಿ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಕಳೆದ ನವೆಂಬರ್‌ನಲ್ಲಿ ಸಂಶೋಧನಾ ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯಲ್ಲಿ, ಶೇ. 48ರಷ್ಟು ಜನ 'ಯಾಂತ್ರಿಕ ಬುದ್ಧಿಮತ್ತೆ ತುಂಬಾ ದೊಡ್ಡ ಅಪಾಯ ಒಡ್ಡಬಹುದು' ಎಂದು ಹೇಳಿದ್ದರು. ಇನ್ನು ಶೇ. 25ರಷ್ಟು ಜನ 'ಏನೂ ಆಗುವುದಿಲ್ಲ' ಎಂದಿದ್ದರು. ಉಳಿದವರು ಫಿಫ್ಟಿ ಫಿಫ್ಟಿ ಎಂದರು. 'ಅತ್ಯಂತ ಮುಂದುವರೆದ ಯಾಂತ್ರಿಕ ಬುದ್ಧಿಮತ್ತೆ ಸರ್ವನಾಶದ ಹಾದಿ ಹಿಡಿದು – ವಿಷ, ವೈರಸ್ಸು, ಬಾಂಬ್ ಸ್ಫೋಟಕ್ಕೆ ಇಳಿದರೆ ಅದನ್ನು ನಿಯಂತ್ರಿಸುವುದು ಸಾಧ್ಯವಿಲ್ಲ, ಏಕೆಂದರೆ ಭವಿಷ್ಯದ ಯಾಂತ್ರಿಕ ಬುದ್ಧಿಮತ್ತೆಗೆ ಅಂಥ ಒಳ್ಳೆಯ ಗುರಿಗಳೇ ಇಲ್ಲ. ಏಕೆಂದರೆ ಅದು ಮನುಷ್ಯನ ರೀತಿ ಯೋಚಿಸುವುದೇ ಇಲ್ಲ' ಎನ್ನುವ ಮಂದಿ ಬಹಳ ಇದ್ದಾರೆ.

ಭಿನ್ನ ಅಭಿಪ್ರಾಯಗಳ ನಡುವೆಯೇ ಇಟಲಿ ದೇಶ ಚಾಟ್ ಜಿಪಿಟಿಯ ಬಳಕೆಯನ್ನು ನಿಷೇಧಿಸಿದೆ. ಯೂರೋಪ್ ಸಮುದಾಯ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಕ್ಟ್' ಜಾರಿಗೆ ತರಲು ಸಜ್ಜಾಗಿದೆ. ಅಮೆರಿಕ 'ಎಐ ಬಿಲ್ ಆಫ್ ರೈಟ್ಸ್' ಜಾರಿಗೆ ತಂದಿದೆ. ದತ್ತಾಂಶ ಕಳ್ಳತನದ ಮೊಕದ್ದಮೆಯ ವಿಷಯವಾಗಿ ಇಟಲಿ ಸರ್ಕಾರ 'ಓಪನ್ ಎಐ' ಕಂಪನಿಯನ್ನು ವಿಚಾರಣೆಗೊಳಪಡಿಸಿದೆ. ಕೆನಡಾದ ಪ್ರೈವೆಸಿ ಕಮೀಷನರ್ ಕಚೇರಿಯ ದತ್ತಾಂಶ ಕಳ್ಳತನದ ಆರೋಪವೂ ಚಾಟ್ ಜಿಪಿಟಿ ಮೇಲಿದೆ, ಕೇಸು ಬಿದ್ದಿದೆ. ಈ ಎಲ್ಲ ಪ್ರಕರಣಗಳ ಬಗ್ಗೆ ಸ್ಪಷ್ಟನೆ ನೀಡಿರುವ ಓಪನ್ ಎಐ ಕಂಪನಿ, ತಾನು ನಿರ್ಮಿಸಿರುವ ಚಾಟ್ ಜಿಪಿಟಿಗಳು ಸುರಕ್ಷಿತ, ತಪ್ಪುರಹಿತ ಮತ್ತು ಗೌಪ್ಯತೆ ಕಾಪಾಡುತ್ತವೆ ಎಂದು ಹೇಳಿದೆ.

ಚಾಟ್ ಜಿಪಿಟಿಯನ್ನು ಬ್ಯಾನ್ ಮಾಡಿದರೂ VPN – ವರ್ಚುವಲ್ ಪ್ರೈವೇಟ್ ನೆಟ್‌ವರ್ಕ್ ಬಳಸಿ ಅದರ ಸಂಪರ್ಕ ಪಡೆಯಬಹುದು. ಇಟಲಿಯಲ್ಲಿ ಚಾಟ್ ಜಿಪಿಟಿ ಬ್ಯಾನ್ ಆದ ತಕ್ಷಣ VPN ಸಂಪರ್ಕ್ ಪಡೆಯಲು ಯತ್ನಿಸುವವರ ಸಂಖ್ಯೆಯಲ್ಲಿ ದಿಢೀರ್ ಏರಿಕೆ ಕಂಡುಬಂದಿರುವುದನ್ನು ಗೂಗಲ್ ಸ್ಪಷ್ಟಪಡಿಸಿದೆ.



ತಂತ್ರಜ್ಞಾನ ಜಗತ್ತಿಗೆ ಹೊಸ ದಾರಿ ಸಿಕ್ಕಂತಿದೆ' ಎನ್ನುವ ನ್ಯಾಸ್‌ಕಾಮ್‌ನ ಅಧ್ಯಕ್ಷೆ ದೇಬ್‌ಜಾನಿ ಘೋಷ್, ಹಿಂದೆಂದೂ ಹೀಗೆ ಆಗಿರಲಿಲ್ಲ ಎನ್ನುತ್ತಾರೆ.

ಓಪನ್ ಎಐ ಕಂಪನಿಯ ಚಾಟ್ ಜಿಪಿಟಿಯ ಕೆಲಸಗಳಿಂದ ಹಲವು ಟೆಕ್ ಕಂಪನಿಗಳ ಕೆಲಸಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಅಮೆರಿಕದ ಸ್ಯಾನ್‌ಡಿಯಾಗೊ ಮೂಲದ ಚೆಗ್ ಕಂಪನಿ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಸಮಸ್ಯೆ, ಕಲಿಕಾ ಅಗತ್ಯಗಳನ್ನು ಆನ್‌ಲೈನ್ ಮಾದರಿಯಲ್ಲೇ ಪೂರೈಸುತ್ತದೆ. ಪ್ರಬಂಧ ಬರೆಯುವುದು, ಲೆಕ್ಕ ಬಿಡಿಸುವುದು, ಪ್ರಮೇಯ ಸಾಧಿಸುವುದು, ಪ್ರಾಜೆಕ್ಟ್ ವರ್ಕ್, ಪ್ರವಾಸ ಕಥನ, ಕಾರ್ಟೂನ್ ರಚನೆ, ಕ್ವಿಜ್‌ಗಳಿಗೆಲ್ಲ ಮಾಹಿತಿ, ವಿಧಾನ, ಉತ್ತರಗಳನ್ನು ಚೆಗ್ ಒದಗಿಸುತ್ತಿತ್ತು. ವಿಶ್ವದ ವಿದ್ಯಾರ್ಥಿಗಳು ಚಾಟ್ ಜಿಪಿಟಿ ಬಳಕೆ ಶುರು ಮಾಡಿದ ಒಂದೇ ವಾರದಲ್ಲಿ ಚೆಗ್ ಕಂಪನಿ ತನ್ನ ಷೇರು ಮಾರುಕಟ್ಟೆಯಲ್ಲಿ ಶೇ.40ರಷ್ಟು ಕುಸಿತ ಕಂಡಿದೆ. ಕಂಪ್ಯೂಟರ್ ದೈತ್ಯ ಎಂದೇ ಹೆಸರಾದ 'ಐಬಿಎಂ' ಕಂಪನಿ ಕೆಲಸಗಾರರ ನೇಮಕಾತಿ ನಿಲ್ಲಿಸಿದೆ. ಸ್ಯಾಮ್‌ಸಂಗ್ ಕಂಪನಿ ತನ್ನ ಕಂಪನಿಯ ಕೆಲಸಗಳಿಗೆ ಚಾಟ್‌ಬಾಟ್ – ಚಾಟ್ ಜಿಪಿಟಿ ಬಳಸದಂತೆ ನಿರ್ಬಂಧ ವಿಧಿಸಿದೆ. ಚಾಟ್ ಜಿಪಿಟಿ ಬಂದಾಗಿನಿಂದ 'ಆ ಕಂಪನಿಯವರು ಕೆಲಸದಿಂದ ಸಾವಿರಾರು ಮಂದಿಯನ್ನು ತೆಗೆದುಹಾಕಿದ್ದಾರೆ, ಇನ್ನೂ ಕೆಲವು ಕಂಪನಿಗಳು ಅದನ್ನೇ ಮಾಡಲಿವೆ' ಎಂದು ವರದಿಯಾಗುತ್ತಿರುವುದು ಯಾಂತ್ರಿಕ ಬುದ್ಧಿಮತ್ತೆಯ ಬಗೆಗೆ ಭಯ ಹುಟ್ಟಿಸುತ್ತಲೇ